**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 02–12–2020**

# ಮಾಧ್ಯಮ ಆಮಂತ್ರಣ

**1. ಸಂತ ಶ್ರೇಷ್ಠ ಕನಕದಾಸ ಜಯಂತಿ – 2020**
"ಕನಕ ಶ್ರೀ" ಪ್ರಶಸ್ತಿ, "ಕನಕ ಗೌರವ" ಹಾಗೂ "ಕನಕ ಯುವ ಪುರಸ್ಕಾರ" ಪ್ರದಾನ ಸಮಾರಂಭ

ಉದ್ಘಾಟನೆ:
ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು

ಅಧ್ಯಕ್ಷತೆ:
ಉದಯ್ ಬಿ. ಗರುಡಾಚಾರ್, ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

**ದಿನಾಂಕ:** 03–12–2020, ಗುರುವಾರ, **ಸಮಯ:** ಬೆಳಿಗ್ಗೆ 11:00 ಗಂಟೆಗೆ
**ಸ್ಥಳ:** ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು.

2. ವಕೀಲರ ದಿನಾಚರಣೆ – 2020 (ಆನ್‌ಲೈನ್ ಕಾರ್ಯಕ್ರಮ)
ZOOM ID: 86805996924
Password: 12345

ಪ್ರಧಾನ ಭಾಷಣಕಾರರು:
ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು

ವಿಶೇಷ ಅತಿಥಿ:
ಜೆ.ಸಿ.ಮಾಧುಸ್ವಾಮಿ, ಕಾನೂನು ಹಾಗೂ ಸಂಸದೀಯ ಸಚಿವರು.

ಅಧ್ಯಕ್ಷತೆ:
ಜೆ.ಎಂ.ಅನಿಲ್ ಕುಮಾರ್, ಅಧ್ಯಕ್ಷರು ಕೆ.ಎಸ್.ಬಿ.ಸಿ ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ರೂ.1837.50 ಲಕ್ಷ ವೆಚ್ಚದಲ್ಲಿ

## 2,340 ಕುಶಲಕರ್ಮಿಗಳಿಗೆ ಸ್ವಯಂ ಉದ್ಯೋಗ ಸೃಷ್ಟಿಸುವ ಗುರಿ : ಪ್ರೊ. ಎನ್.ಲಿಂಗಣ್ಣ

ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ): ಪ್ರಸಕ್ತ ಸಾಲಿನಲ್ಲಿ 2,340 ಕುಶಲಕರ್ಮಿಗಳಿಗೆ ರೂ.1837.50 ಲಕ್ಷಗಳ ವೆಚ್ಚದಲ್ಲಿ ವಿವಿಧ ಯೋಜನೆಗಳಡಿ ಸ್ವಯಂ ಉದ್ಯೋಗ ಕಲ್ಪಿಸಲಾಗುವುದು ಎಂದು ಡಾ:ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ನೂತನ ಅಧ್ಯಕ್ಷ ಪ್ರೊ.ಲಿಂಗಣ್ಣ ತಿಳಿಸಿದರು.

ಅವರು ಇಂದು ಡಾ:ಬಾಬು ಜಗಜೀವನ ರಾಂ ಲಿಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ತಾವು ಡಿಸೆಂಬರ್ 01 ರಂದು ಅಧಿಕಾರ ವಹಿಸಿಕೊಂಡಿದ್ದು, ಈ ನಿಗಮದ ಆರ್ಥಿಕ ಸದೃಢತೆ, ಅಭಿವೃದ್ಧಿಗಾಗಿ ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸುತ್ತೇನೆ ಎಂದರು.

ಪಾರಂಪರಿಕವಾಗಿ ಚರ್ಮಗಾರಿಕೆ ವೃತ್ತಿ ಮಾಡುತ್ತಿರುವ ಕುಟುಂಬಗಳ ಸರ್ವತೋಮುಖ ಅಭಿವೃದ್ಧಿಯ ಉದ್ದೇಶದಿಂದ ಹಾಗೂ ಅವರ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯವನ್ನು ಗಮನದಲ್ಲಿಟ್ಟುಕೊಂಡು ನಿಗಮವು ಹಲವು ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಿದೆ ಎಂದರು.

2020-21ನೇ ಸಾಲಿಗೆ 40.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಿದ್ದು, 65.89 ಕೋಟಿಗಳ ಕ್ರಿಯಾ ಯೋಜನೆ ಸಿದ್ಧಪಡಿಸಿ ಮಂಡಳಿ ಮತ್ತು ಸರ್ಕಾರದ ಅನುಮೋದನೆ ಪಡೆಯಲಾಗಿದೆ. ಈಗಾಗಲೆ ಎಲ್ಲಾ ಜಿಲ್ಲೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು ಯೋಜನೆಗಳ ಅನುಷ್ಠಾನ ಪ್ರಾರಂಭವಾಗಿದ್ದು, ಮಾರ್ಚ್ 2021ರ ಅಂತ್ಯದೊಳಗೆ ನಿಗಧಿತ ಗುರಿ ಸಾಧಿಸಿ ಪೂರ್ಣ ಅನುದಾನವನ್ನು ವೆಚ್ಚ ಮಾಡಲಾಗುವುದು ಎಂದರು.

ನಿಗಮವು ವಾಣಿಜ್ಯ ಚಟುವಟಿಕೆಗಳಡಿ ರಾಜ್ಯಾದ್ಯಂತ 15 ಲಿಡ್ಕರ್ ಮಾರಾಟ ಮಳಿಗೆಗಳನ್ನು ಹೊಂದಿದ್ದು, ಈ ಮಳಿಗೆಗಳಲ್ಲಿ ಕುಶಲಕರ್ಮಿಗಳು ತಯಾರಿಸುವ ಉತ್ಪನ್ನಗಳನ್ನು ಲಿಡ್ಕರ್ ಬ್ರಾಂಡ್ ಅಡಿ ಮಾರಾಟ ಮಾಡಲಾಗುತ್ತಿದ್ದು, ಸಣ್ಣ ಪ್ರಮಾಣದ ಘಟಕಗಳು ತಯಾರಿಸುವ ಚರ್ಮದ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಪ್ರಮುಖ ಹಬ್ಬಗಳಲ್ಲಿ ರಿಯಾಯಿತಿ ಮಾರಾಟವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಸುಮಾರು 16 ಸಾವಿರಕ್ಕಿಂತ ಹೆಚ್ಚು ಚರ್ಮಕಾರರಿಗೆ ಪಾದುಕೆ ಕುಟೀರ, ಸ್ವಾವಲಂಬಿ ಮಾರಾಟ ಮಳಿಗೆ, ಸಂಚಾರಿ ಮಾರಾಟ ಮಳಿಗೆಗಳಿಗೆ ಬಂಡವಾಳ ಒದಗಿಸಲಾಗಿದೆ. 18 ಸಾವಿರಕ್ಕಿಂತ ಹೆಚ್ಚು ಚರ್ಮ ಕುಶಲಕರ್ಮಿಗಳಿಗೆ ಪಾದರಕ್ಷೆ ಮತ್ತು ಚರ್ಮ ವಸ್ತುಗಳ ತಯಾರಿಕೆಯಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ 750 ಕುಶಲಕರ್ಮಿಗಳಿಗೆ ರೂ.275.58 ಲಕ್ಷ ವೆಚ್ಚದಲ್ಲಿ ತರಬೇತಿ ನೀಡಲಾಗುತ್ತಿದೆ.

ನಿಗಮವು ಇದುವರೆವಿಗೂ ಸುಮಾರು 7,500 ಕ್ಕಿಂತ ಹೆಚ್ಚು ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ 400 ವಸತಿ ಕಾರ್ಯಾಗಾರಗಳನ್ನು 992.44 ಲಕ್ಷ ವೆಚ್ಚದಲ್ಲಿ ಒದಗಿಸಲಾಗಿದೆ ಎಂದರು. ಕೋವಿಡ್ ಸಂದರ್ಭದಲ್ಲಿ ಸಂಕಷ್ಟಕ್ಕೊಳಗಾದ 11,772 ಚರ್ಮ ಕುಶಲಕರ್ಮಿಗಳಿಗೆ ರೂ. 5 ಸಾವಿರದಂತೆ 5.89 ಕೋಟಿ ರೂ.ಗಳ ವಿತರಿಸಲಾಗಿದೆ.

ನಿಗಮವನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಅವುಗಳಲ್ಲಿ ಲಿಡ್ಕರ್ ಮಾರಾಟ ಮಳಿಗೆಗಳಿಲ್ಲದ 17 ಜಿಲ್ಲೆಗಳಲ್ಲಿ ಫ್ರಾಂಚೈಸಿಗಳ ಮೂಲಕ ಮಾರಾಟ ಮಳಿಗೆಗಳನ್ನು ತೆರೆದು ಮಾರಾಟ ಜಾಲವನ್ನು ವಿಸ್ತರಿಸಲಾಗುವುದು. ಎಂ.ಜಿ ರಸ್ತೆಯಲ್ಲಿರುವ ಕಾವೇರಿ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಎಂಪೋರಿಯಂನಲ್ಲಿ ಕೊಲ್ಹಾಪುರಿ ಪಾದರಕ್ಷೆಗಳ ಮಾರಾಟ ಕೇಂದ್ರವನ್ನು ತೆರೆಯಲಾಗುವುದು.

ಮಧುಮೇಹ ಮತ್ತು ಕೀಲು ಸಮಸ್ಯೆಗಳುಳ್ಳ ಗ್ರಾಹಕರಿಗೆ ಅವರ ಪಾದಗಳ ಸಮಸ್ಯೆಗಳಿಗೆ ಸರಿಹೊಂದುವಂತೆ ಕಸ್ಟಮೈಸ್ ಮಾಡಿ ಪಾದರಕ್ಷೆಗಳನ್ನು ಸಿದ್ಧಪಡಿಸುವ ವ್ಯವಸ್ಥೆಯನ್ನು ಪ್ರಥಮವಾಗಿ ಜಯನಗರ ಮಾರಾಟ ಮಳಿಗೆಯಲ್ಲಿ ಮಾಡಲಾಗುವುದು.

ಕರ್ನಾಟಕ ರಾಜ್ಯದಲ್ಲಿ ಜಿ.ಐ. ಟ್ಯಾಗ್ ಪಡೆದ ಉತ್ಪನ್ನಗಳ ಮಾರಾಟಕ್ಕಾಗಿ ವಿಶ್ವೇಶ್ವರಯ್ಯ ಟ್ರೇಡ್ ಪ್ರೊಮೋಷನ್ ಸೆಂಟರ್ ರವರು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಳಿಗೆ ತೆರೆಯುತ್ತಿದ್ದು ಅದರಲ್ಲಿ ಕೊಲ್ಹಾಪುರಿ ಚಪ್ಪಲಿಗಳ ಮಾರಾಟ ಕೌಂಟರ್ ತೆರೆಯಲಾಗುವುದು.

ಚರ್ಮ ಕುಶಲಕರ್ಮಿಗಳಿಗೆ ನೀಡಲಾಗುತ್ತಿರುವ ಕೌಶಲ್ಯ ಅಭಿವೃದ್ಧಿ ತರಬೇತಿಗಳ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಲೆದರ್ ಸೆಕ್ಟರ್ ಸ್ಕಿಲ್ ಕೌನ್ಸಿಲ್, ಚೆನ್ನೈ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಕೋವಿಡ್-19 ಸಂಕಷ್ಟಕ್ಕೊಳಗಾಗಿರುವ ಚರ್ಮ ಕುಶಲಕರ್ಮಿಗಳಿಗೆ ಜೀವನೋಪಾಯಕ್ಕಾಗಿ ಪ್ರಥಮ ಬಾರಿಗೆ ನೇರ ಸಾಲ ಯೋಜನೆ ಜಾರಿಗೆ ತರಲಾಗಿದೆ. ಕುಶಲಕರ್ಮಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಅಧ್ಯಯನ ಮಾಡಲು ಮತ್ತು ನಿಖರವಾದ ಸಂಖ್ಯೆ ತಿಳಿಯಲು ಐಎಸ್ಇಸಿ ಸಂಸ್ಥೆಯ ಮೂಲಕ ಸಮೀಕ್ಷೆ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ: ನಟರಾಜ್ ಉಪಸ್ಥಿತರಿದ್ದರು.

# ಭ್ರಷ್ಟಾಚಾರ ನಿಗ್ರಹ ದಳ ದಾಳಿ

**ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ) :**

ಬೆಂಗಳೂರು ರಾಜಾಜಿನಗರದ ನಿವಾಸಿಯೊಬ್ಬರು ಕಾಚೋಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಮಾಗಡಿ ರಸ್ತೆ, ಬೆಂಗಳೂರು ಇಲ್ಲಿ ಹೊಸದಾಗಿ ನೀರಿನ ಶುದ್ಧೀಕರಣ ಘಟಕ (ವಾಟರ್ ಆ್ಯರೋ ಪ್ಲಾಂಟ್) ತೆರೆಯಲು ಉದ್ದೇಶಿಸಿ ಪರವಾನಗೆ ಪಡೆಯಲು ಅಕ್ಟೋಬರ್-2020ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಾಸರಹಳ್ಳಿ ವಲಯದ ಪ್ರಾದೇಶಿಕ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಕೆ.ವಿ.ಶಿವಕುಮಾರ್, ಪರಿಸರ ಅಧಿಕಾರಿ, ಇವರು ಹೊಸದಾಗಿ ನೀರಿನ ಶುದ್ಧೀಕರಣ ಘಟಕ (ವಾಟರ್ ಆ್ಯರೋ ಪ್ಲಾಂಟ್) ಪ್ರಾರಂಭಿಸಲು ಪರವಾನಿಗೆ ನೀಡಲು ದೂರುದಾರರಿಂದ 50 ಸಾವಿರ ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿನಾಂಕ:30.11.2020 ರಂದು ದೂರುದಾರರು ನೀಡಿದ ದೂರಿನ ಮೇರೆಗೆ ಈ ದಿನ ದಿನಾಂಕ: 01.12.2020 ರಂದು ಟ್ರ್ಯಾಪ್ ಕಾರ್ಯಾಚರಣೆ ಕೈಗೊಳ್ಳಲಾಗಿ ದೂರುದಾರರಿಂದ ಕೆ.ವಿ.ಶಿವಕುಮಾರ್, ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ ದಾಸರಹಳ್ಳಿ ವಲಯ ಇವರು ರೂ. 25 ಸಾವಿರ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಟ್ರ್ಯಾಪ್ ಕಾರ್ಯಾಚರಣೆ ವೇಳೆ ಶ್ರೀ ಸೊಮಶೇಖರ್ ಕೆ.ಎಂ, ಉಪ ಪರಿಸರಅಧಿಕಾರಿ ಪ್ರಾದೇಶಿಕ ಕಛೇರಿ ದಾಸರಹಳ್ಳಿ ವಲಯ ರವರು ಇನ್ನೂ ಹೆಚ್ಚಿನ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಕೆ.ವಿ.ಶಿವಕುಮಾರ್, ಪರಿಸರ ಅಧಿಕಾರಿ ಮತ್ತು ಸೊಮಶೇಖರ್ ಕೆ.ಎಂ, ಉಪ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ ದಾಸರಹಳ್ಳಿ ವಲಯ ಬೆಂಗಳೂರು ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## NTS & NMMS ಪರೀಕ್ಷೆ ಕುರಿತು

## ದೂರದರ್ಶನ ಚಂದನ ವಾಹಿನಿಯಲ್ಲಿ ನೇರಪ್ರಸಾರ ಕಾರ್ಯಕ್ರಮ

**ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ) :**

2020–21 ನೇ ಸಾಲಿನಲ್ಲಿ NTS & NMMS ಪರೀಕ್ಷೆಗಳಿಗೆ ಸಂಬಂಧಿಸಿದಂತೆ ದೂರದರ್ಶನ ಚಂದನ ವಾಹಿನಿಯಲ್ಲಿ ದಿನಾಂಕ: 04.12.2020 ರಂದು ನೇರಪ್ರಸಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

2020–21ನೇ ಸಾಲಿನ NTS-NMMS ಪರೀಕ್ಷೆಗಳನ್ನು ದಿನಾಂಕ: 24.01.2021 ರಂದು ನಡೆಸಲಾಗುತ್ತಿದ್ದು, ದಿನಾಂಕ: 09.11.2020 ರಿಂದ 10.12.2020 ರವರೆಗೆ ಆನ್‌ಲೈನ್ ಮೂಲಕ ಶಾಲಾ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿಗಳ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯು.ಎ.ಎ.ಸಿ ರವರು ದೂರದರ್ಶನ ಚಂದನ ವಾಹಿನಿಯಲ್ಲಿ ದಿನಾಂಕ: 04.12.2020 ಸಮಯ ಮಧ್ಯಾಹ್ನ: 12.00 ರಿಂದ 1.00 ರವರೆಗೆ ನೇರಪ್ರಸಾರ ಕಾರ್ಯಕ್ರಮದಲ್ಲಿ ಮಾಹಿತಿಯನ್ನು ನೀಡಲಿದ್ದಾರೆ.

ಇದರ ಸದುಪಯೋಗವನ್ನು ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಅರ್ಜಿ ಸಲ್ಲಿಸಲು ಇಲಾಖಾ ಅಧಿಕಾರಿಗಳು ಮತ್ತು ಶಾಲಾ ಮುಖ್ಯ ಶಿಕ್ಷಕರು ಅಗತ್ಯ ಕ್ರಮ ಕೈಗೊಳ್ಳಲು ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ): ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಡಿಸೆಂಬರ್ 03 ರಂದು ಉಡುಪಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು ಹಾಗೂ ವಸತಿ ಸಚಿವ ವಿ.ಸೋಮಣ್ಣ ಅವರು ಡಿಸೆಂಬರ್ 03 ರಂದು ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಮತ್ತು ಆಹಾರ ಹಾಗೂ ನಾಗರಿಕ ಸಚಿವ ಗೋಪಾಲಯ್ಯ ಅವರು ಹಾಸನ ಜಿಲ್ಲೆಯಲ್ಲಿ ಡಿಸೆಂಬರ್ 5 ಮತ್ತು 6 ರಂದು ಪ್ರವಾಸ ಕೈಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಮಾವು ಮಾರುಕಟ್ಟೆ ಸುಸ್ಥಿರತೆಗೆ ನೇರ ಮಾರುಕಟ್ಟೆ ಅಗತ್ಯ: ಸಚಿವ ಡಾ.ಕೆ. ಸುಧಾರಕರ್

ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ):

ಮಾವಿನ ಬೆಳೆಯ ಸರ್ವಾಂಗೀಣ ಅಭಿವೃದ್ಧಿ ಹಾಗೂ ಮಾವು ಮಾರಾಟ, ಮಾವಿನ ಹಣ್ಣುಗಳ ಮಾರಾಟಕ್ಕೆ ಸೂಕ್ತ ವೇದಿಕೆ ಕಲ್ಪಿಸುವುದರ ಮೂಲಕ ಪ್ರೋತ್ಸಾಹಿಸುವ ಅಗತ್ಯ ಇದೆ

ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇಂದು ಲಾಲ್‌ಬಾಗ್‌ನಲ್ಲಿ ಮಾವು ನಿಗಮದ ನೂತನ ಅಧ್ಯಕ್ಷರ ಅಧಿಕಾರ ಪದಗ್ರಹಣ ಹಾಗೂ ಮಾವು ಬೆಳೆಗಾರರೊಂದಿಗೆ ಸಂವಾದ ಕಾರ್ಯಕ್ರಮಕ್ಕೆ ಸಚಿವ ಡಾ.ಕೆ. ಸುಧಾಕರ್ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

. ಇದೇ ಸಂದರ್ಭದಲ್ಲಿ ಸಚಿವರು ಮಾವು ತಾಂತ್ರಿಕ ಮಾಹಿತಿ ಒಳಗೊಂಡ ಕರಪತ್ರ ಹಾಗೂ ಭಿತ್ತಿ ಪತ್ರಗಳನ್ನು ಬಿಡುಗಡೆ ಮಾಡಿದರು. ಕರಪತ್ರ ಹಾಗೂ ಭಿತ್ತಿ ಪತ್ರ ನವೆಂಬರ್/ಡಿಸೆಂಬರ್ 2020ರ ಮಾಹೆಯಲ್ಲಿ ಹಾಗೂ ನಂತರ ಹೂ ಬಿಡುವ ಮತ್ತು ಕಾಯಿ ಕಚ್ಚುವ ಅವಧಿಯಲ್ಲಿ ಕೈಗೊಳ್ಳಬೇಕಾದ ಸಸ್ಯ ಸಂರಕ್ಷಣಾ ಕ್ರಮಗಳ ಮಾಹಿತಿ ಒಳಗೊಂಡಿದೆ.

ಮಾವು ಮಕ್ಕಳಿಂದ ಹಿಡಿದು ದೊಡ್ಡವರಿಗೂ ಪ್ರಿಯವಾದ ಹಣ್ಣಾಗಿದೆ. ಮಾವಿನ ಹಣ್ಣಿಗೆ ಬೇಡಿಕೆ ಹೆಚ್ಚಾಗಿದೆ. ಮಾವು ಮಾರುಕಟ್ಟೆ ಸುಸ್ಥಿರತೆಗೆ ಅಗತ್ಯವಾದ ನೇರ ಮಾರುಕಟ್ಟೆ, ಹೊರರಾಜ್ಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳ ಸಂಪರ್ಕ ಕಲ್ಪಿಸಬೇಕು. ಮಾವಿಗೆ ರೋಗ ಬಂದಾಗ ಮತ್ತು ನೈಸರ್ಗಿಕವಾಗಿ ಬೆಳೆಯಲು ರೈತರು ಕೃಷಿ ವಿಶ್ವವಿದ್ಯಾನಿಲಯದ ಸಹಾಯ ಪಡೆಯಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾವು ನಿಗಮದ ನೂತನ ಅಧ್ಯಕ್ಷರಾಗಿ ಕೆ.ವಿ.ನಾಗರಾಜು ಅಧಿಕಾರ ಸ್ವೀಕರಿಸಿದರು. ನಂತರ ಮಾತನಾಡಿದ ಅವರು ರಾಜ್ಯದಲ್ಲಿ ಮಾವು ಬೇಸಾಯ ಮತ್ತು ಉತ್ಪಾದನೆ ಕುರಿತು ತಾಂತ್ರಿಕ ಮಾಹಿತಿಯನ್ನು ಮಾವು ಬೆಳೆಗಾರರಿಗೆ ಒದಗಿಸಬೇಕು. ಹೋಬಳಿಮಟ್ಟ/ಜಿಲ್ಲಾ ಮಟ್ಟ/ರಾಜ್ಯ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಮಾವು ಬೆಳೆಗಾರರಿಗೆ ವಿವಿಧ ಜಿಲ್ಲೆ, ಮತ್ತು ಹೊರ ರಾಜ್ಯಗಳಿಗೆ ಅಧ್ಯಯನ ಪ್ರವಾಸ ಏರ್ಪಡಿಸಬೇದು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಡಾ.ಸಿ.ಜಿ.ನಾಗರಾಜು ಪ್ರಸ್ತಾವಿಕ ಭಾಷಣ ಮಾಡಿದರು. ನಿವೃತ್ತ ತೋಟಗಾರಿಕೆ ಅಪರ ನಿರ್ದೇಶಕರಾದ ಎಸ್.ವಿ. ಹಿತ್ತಲಮನಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ):

ಆಯೋಗವು ದಿನಾಂಕ 23-03-2018ರ ಅಧಿಸೂಚನೆಯಲ್ಲಿ ಅಧಿಸೂಚಿಸಿದ ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉರ್ದು ಭಾಷಾ ಉಪನ್ಯಾಸಕರು - 07 + 03(ಹೈಕ) ಹುದ್ದೆಗಳ ಮತ್ತು ದಿನಾಂಕ 06-12-2018ರ ಅಧಿಸೂಚನೆಯಲ್ಲಿ ಅಧಿಸೂಚಿಸಿದ ತೋಟಗಾರಿಕೆ ಇಲಾಖೆಯಲ್ಲಿನ ಸಹಾಯಕ ತೋಟಗಾರಿಕೆ ಅಧಿಕಾರಿಗಳು 221 + 88(ಹೈಕ) ಹುದ್ದೆಗಳ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಮುಖ್ಯ ಗ್ರಂಥಾಲಯಾಧಿಕಾರಿ 05 (ಹೈಕ) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗಳನ್ನು ದಿನಾಂಕ: 01-12-2020 ರಂದು ಆಯೋಗದ ಅಂತರ್ಜಾಲ "http://kpsc.kar.nic.in/ Selection Lists" ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಸದರಿ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು 07 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು - 560001, ಇವರಿಗೆ ಸಲ್ಲಿಸಬಹುದೆಂದು, ಇದಲ್ಲದೇ ಆಕ್ಷೇಪಣೆಗಳನ್ನು ಇ-ಮೇಲ್ kpsc-ka@nic.in ಮುಖಾಂತರವು ಸಲ್ಲಿಸಬಹುದು ಹಾಗೂ ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

## ಕನ್ನಡದಲ್ಲಿ ವಿಜ್ಞಾನ ಉಪನ್ಯಾಸ ಸ್ಪರ್ಧೆಯ ಅರ್ಜಿ ಸಲ್ಲಿಸುವ ದಿನಾಂಕವನ್ನು ಮುಂದೂಡಲಾಗಿದೆ.

ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ):

ವಿಜ್ಞಾನವನ್ನು ಮಾತೃಭಾಷೆಯ ಮೂಲಕ ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವ, ಶೈಕ್ಷಣಿಕ ವಲಯದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಹಾಗೂ ಕನ್ನಡದಲ್ಲಿ ಆಕರ್ಷಕವಾಗಿ

ಜನಪ್ರಿಯ ಶೈಲಿಯಲ್ಲಿ ವಿಜ್ಞಾನದ ಸಂವಹನ ಸಾಧ್ಯ ಎಂಬುದನ್ನು ಸಾಬೀತುಗೊಳಿಸಲು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಜ್ಞಾನ ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಹಾಗೂ ಬಿ.ಈಡಿ. ಪ್ರಶಿಕ್ಷಣಾರ್ಥಿಗಳಿಗಾಗಿ ಅಂತರ ವಿಶ್ವವಿದ್ಯಾಲಯ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಕನ್ನಡ ವಿಜ್ಞಾನ ಉಪನ್ಯಾಸ (ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಗಣಿತ ವಿಷಯಗಳನ್ನು) ವ್ಯಾಸಾಂಗ ಮಾಡುತ್ತಿರುವ ಪದವಿ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆಯಲ್ಲಿ ಭೌತವಿಜ್ಞಾನ, ಜೀವವಿಜ್ಞಾನ, ರಸಾಯನ ವಿಜ್ಞಾನ ಹಾಗೂ ಗಣಿತ ವಿಭಾಗಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ತಲಾ ಇಬ್ಬರು ವಿದ್ಯಾರ್ಥಿಗಳಂತೆ ಒಟ್ಟು 8 ವಿದ್ಯಾರ್ಥಿಗಳನ್ನು ಒಂದು ವಿಶ್ವವಿದ್ಯಾಲಯದಿಂದ ಆಯ್ಕೆ ಮಾಡಲಾಗುತ್ತದೆ. ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.

ಆಸಕ್ತ ವಿದ್ಯಾರ್ಥಿಗಳು ನಿಗದಿತ ಅರ್ಜಿಯನ್ನು ಡಿಸೆಂಬರ್ 18, 2020ರವರೆಗೆ ವಿಸ್ತರಿಸಲಾಗಿದ್ದು, ಈ ಕಾರ್ಯಕ್ರಮದ ರಾಜ್ಯ ಸಂಯೋಜಕರಾದ ಎಚ್.ಎಸ್.ಟಿ. ಸ್ವಾಮಿ ಮೊಬೈಲ್ 9448565534, ಯೋಜನಾ ಸಹಾಯಕರಾದ ಶ್ರೀಮತಿ ದೇವಿಕಾ ಕೀರ್ತಿ ಮೊಬೈಲ್ ಸಂಖ್ಯೆ 9449530245, ರಾಜಶೇಖರಗೌಡ ಪಾಟೀಲ ಮೊಬೈಲ್ ಸಂಖ್ಯೆ 9008442557 ಹಾಗೂ ಕರಾವಿಪ ಕೇಂದ್ರ ಕಚೇರಿ ಮೊಬೈಲ್ ಸಂಖ್ಯೆ 9483549159 ಇವರನ್ನು ಸಂಪರ್ಕಿಸುವುದು ಹಾಗೂ https://forms.gel/GMvqcyzgcHXXHgNw8 ಈ ಲಿಂಕ್ ಬಳಸಿ ಉಚಿತವಾಗಿ ಆನ್ ಲೈನ್ ಮೂಲಕ ನೋಂದಣಿಮಾಡಿಕೊಳ್ಳುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## **NABARD signs MOU with SBI for concessional Credit– 02.12.2020**

Bengaluru, Dec 02 (Karnataka Information): Dr.GovindaRajuluChintala, NABARD, Chairmanrecently announced Rs. 5000 Cr concessional refinance facility for banks and financial institutions for providing finance to the beneficiaries of the 3295 watershed development and 791 tribal development projects across the country, over a period of three years from 2020-21 to 2022-23 and digitization of 2 million SHGs by 2021-22.Movingahead in this direction, NABARD, Karnataka Regional OfficeBengaluruentered intoMoU today with State Bank of India, LHO, Bengaluru for joint interventions by the 2 Institutions in the State. The MoU was signed at NABARD, Regional Office, Bengaluruby Shri Niraj Kumar Verma, CGM, NABARD and Shri AbhijitMajumder, CGM, SBI. Through this MoU NABARD aims to provide grant

support, concessional refinance and undertake capacity building of the stakeholders of various livelihood interventions promoted by NABARD. SBI, on the other hand, will give priority to extend credit to these beneficiaries.

With this MoU, the largest Developmental Financial Institution and the largest Public Sector Bank of the country look forward to associate together to have convergence of ongoing development initiatives of NABARD and SBI, thereby,aiding the beneficiariesof **Tribal Development Fund (TDF), Watershed Development Fund (WDF), Farmer Producer Organisation (FPOs), SHGs, JLGs,etc.** The MoU aims to benefit farmers and 45000 beneficiaries of 260 FPOs in 28 districts, 8500 beneficiaries in 20 districts of 70 watersheds and 15 Tribal Development programmes (wadis) alongwith JLGs/ SHGs through E- Shakti (digitization)/ Artisans/ Agri-preneurs /Agri Start Ups, etc. in the State.

Under NABARD's **E Shakti project** launched in 29 districts of Karnataka as on 01.10.2020, 3,02,614 SHGs have been digitized and 2,81,755 SHGs are credit linked. This MoUaims at SBIacting as an Implementing Agency for digitizing their SHGs and on-boarding on our E-Shakti portal across Karnataka. This will facilitate availability of credit to the SHGs for promotion of their livelihood. Further, each branch of SBI in rural and semi-urban areas will strive to finance 50 Joint Liability Groups (JLGs) and SHGs annually. NABARD would also extend grant support for promotion of JLGs and SBI would explore the possibility of entering into a separate MoU with NABARD for promotion of JLGs with BC/BF support.

Financial Literacy Programme: NABARD would extend support @ 60% of Rs. 5,000/- for conduct of Financial Literacy Programmes in the rural/semi-urban branches and through FLCs of SBI. Aiming at Financial Inclusion, NABARD would also extend grant support for procuring infrastructure support like VSAT, mobile signal boosters, handheld projectors etc. to SBI.

Speaking on the occasion Shri Niraj Kumar Verma ,CGM, NABARD, stated that this is a moment of delight for both the organizations and he hoped that this collaboration will

not only benefit the various stakeholders of rural India but will also be an example for other Financial Institutions to emulate.

Shri AbhijitMajumder, CGM, SBI, said that with this intervention, SBI is looking forward to further strengthen its' ties with NABARD and make a difference in the development of rural areas and bring about rural prosperity. SBI also looks forward to further its' rural lending with this joint intervention.

This combined effort could be a potential game changer in facilitating integrated development of the agriculture sectors and contribute significantly towards economic growth. Senior Officers-GMs and DGMs- of both the organizations were present on the occasion.

MOU being signed by Shri Niraj Kumar, Verma, CGM NABARD and Shri AbhijitMajumder, CGM, SBI

## ಎಸಿಬಿ ದಾಳಿ

**ಬೆಂಗಳೂರು, ಡಿಸೆಂಬರ್ 02 (ಕರ್ನಾಟಕ ವಾರ್ತೆ) :**

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ನಿವಾಸಿಯೊಬ್ಬರು ಮಾಲಾರು ಖಾಸಗಿ ಸಂಸ್ಥೆಯ ಬ್ರಾಂಚ್‌ನಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ಇವರು ಕೆಲಸ ನಿರ್ವಹಿಸುತ್ತಿರುವ ಖಾಸಗಿ ಸಂಸ್ಥೆಗೆ ದಿನಗೂಲಿ ಕಾರ್ಮಿಕರ ಅವಶ್ಯಕತೆ ಇದ್ದುದರಿಂದ ತಾತ್ಕಲಿಕವಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳಲು ಪರವಾನಿಗೆ ನೀಡುವಂತೆ ಆಸಿಸ್ಟೆಂಟ್ ಲೇಬರ್ ಕಮೀಷನರ್, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ ಬೆಂಗಳೂರು ರವರಿಗೆ  ಜನವರಿ 2017 ನೇ ಸಾಲಿನಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿದ್ದರು.

ಖಾಸಗಿ ಸಂಸ್ಥೆಯ ಮುಖ್ಯ ಕಛೇರಿಯು ಪುನಾದಲ್ಲಿದ್ದು, ಈ ಸಂಸ್ಥೆಯ ಮುಖ್ಯಸ್ಥರಿಗೆ ತಾತ್ಕಲಿಕವಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳಲು ಪರವಾನಿಗೆ ನೀಡುವ ಸಲುವಾಗಿ ಶ್ರೀ ಸಂತೋಷ್ ಇಪ್ಪರಗಿ, ಆಸಿಸ್ಟೆಂಟ್, ಲೇಬರ್ ಕಮೀಷನರ್, ಕಾರ್ಮಿಕ ಭವನ, ವಿಭಾಗ–3 ಬನ್ನೇರುಘಟ್ಟ ರಸ್ತೆ,

ಬೆಂಗಳೂರು ರವರು  ರೂ. 2 ಲಕ್ಷ  ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅಂತಿಮವಾಗಿ ರೂ. 1,80,000/- ಲಂಚದ ಹಣವನ್ನು ನೀಡುವಂತೆ ಒತ್ತಾಯಿಸಿರುತ್ತಾರೆ.

ದಿನಾಂಕ:01.12.2020 ರಂದು ದೂರುದಾರರು ನೀಡಿದ ದೂರಿನ ಮೇರೆಗೆ ಈ ದಿನ ದಿನಾಂಕ: 02.12.2020 ರಂದು ಟ್ರ್ಯಾಪ್ ಕಾರ್ಯಾಚರಣೆ ಕೈಗೊಳ್ಳಲಾಗಿ ದೂರುದಾರರಿಂದ ಶ್ರೀ ಶಿವಕುಮಾರ್, ನಿವೃತ್ತ ಲೇಬರ್ ಇನ್ಸ್‌ಪೆಕ್ಟರ್ ಇವರು ಶ್ರೀ ಸಂತೋಷ್ ಇಪ್ಪರಗಿ, ಆಸಿಸ್ಟೆಂಟ್, ಲೇಬರ್ ಕಮೀಷನರ್ ಇವರು ಪರವಾಗಿ  ರೂ. 1,80,000/- ಲಂಚದ ಹಣವನ್ನು  ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಶ್ರೀ ಸಂತೋಷ್ ಇಪ್ಪರಗಿ, ಆಸಿಸ್ಟೆಂಟ್, ಲೇಬರ್ ಕಮೀಷನರ್, ಕಾರ್ಮಿಕ ಭವನ, ವಿಭಾಗ-3 ಬನ್ನೇರುಘಟ್ಟ ರಸ್ತೆ, ಬೆಂಗಳೂರು ಮತ್ತು ಶ್ರೀ ಶಿವಕುಮಾರ್, ನಿವೃತ್ತ ಲೇಬರ್ ಇನ್ಸ್‌ಪೆಕ್ಟರ್ ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.